ಬಂದು ಹೆಮ್ಮೆಯಿಂದ ಓಡಾಡುತ್ತಿದ್ದ ಸಮಾಧಿ ಶಿವುವನ್ನು ನಿಲ್ಲಿಸಿ, 'ಇದು ಸ್ವಲ್ಪ ಓವರ್ ಆಯ್ತು ಅನ್ನಿಸ್ತಿಲ್ವಾ?' ಅಂದ.

ಅರವಿಂದನ ಮಾತಿನಿಂದ ಶಿವುವಿಗೆ ಬೇಸರವಾಗಿ ಹೋಯಿತು. ''ಅದೇನು ಹಾಗೆ ಹೇಳ್ತೀರಾ ಸಾರ್? ಜೇಕೆ ಸಾರ್‌ಗೆ ಪ್ರಾಣಿ ಪಕ್ಷಿಗಳು ಅಂದ್ರೆ ತುಂಬಾ ಇಷ್ಟ. ಅವರ ಮನೇಲಿರೋ ನಾಯೀ ಮರೀನಾ ಹೇಗೆ ನೋಡ್ಕೋತಾರೆ ಗೊತ್ತಾ? ಸೇಮ್ ಅವ್ರ ಮಕ್ಕಳ್‌ಥರಾನೇ. ಅದು ಬಿಡಿ, ಮೂರು ವರ್ಷದ ಹಿಂದೆ ಅವರ ಮೊದಲಿನ ನಾಯಿ ಸತ್ತು ಹೋಯ್ತು. ಅದನ್ನ ಇದೇ ಉತ್ತರಳ್ಳಿ ರಸ್ತೆಯ ಮಶಾಣದಲ್ಲಿ ಮಣ್ ಮಾಡಿ ಬಂದ್ರು. ಅಲ್ಲಿ ಯಾವ್ದೇ ಪ್ರಾಣೀನಾ ಮಣ್ಣು ಮಾಡಿದ ಜಾಗ್ದಲ್ಲಿ ಒಂದು ವರ್ಷದವರೆಗೆ ಮಾತ್ರ ಬೇರೆ ಪ್ರಾಣೀನಾ ಹುಗಿಯೊಲ್ಲ. ಆದ್ರೆ ಜೇಕೆ ಸಾರು ಅವರ ನಾಯಿ ಜಾಗ್ದಲ್ಲಿ ಬೇರೆ ಪ್ರಾಣೀನಾ ಮಣ್ ಮಾಡ್ಬಾರದೂ ಅಂತಾ ಇಪ್ಪತ್ತು ಸಾವಿರ ಎಕ್ಸ್‌ಟ್ರಾ ಕೊಟ್ಟು ಮುಂದಿನ ವರ್ಷಕ್ಕೂ ಹಾಗೇ ಇರಿಸಿಕೊಂಡಿದ್ರು. ಗೊತ್ತಾ? ಅಷ್ಟು ಅಟ್ಯಾಚ್ಮೆಂಟು ಅವರಿಗೆ. ನಿಮಗೆ ನಾ ಹೇಳೋದು ಸುಳ್ಳು ಅನಿಸಿದ್ರೆ ಜೇಕೆ ಸರ್ ಮನೆ ಕೆಲಸದವಳ ನಂಬರ್ ಬೇಕಾದ್ರೂ ಕೊಡ್ತೀನಿ. ಅವಳನ್ನೇ ಕೇಳಿ ನೋಡಿ. 'ಸಾರ್ ಮನೇಲಿ ಕೆಲಸದವಳಾಗಿ ಇರೋ ಬದ್ಲು, ನಾಯಿಯಾಗಿ ಹುಟ್ಟಿದ್ರೇ ಚೆನ್ನಾಗಿತ್ತು' ಅನ್ನೋದು ಅವಳ ಮಾಮೂಲಿ ಡೈಲಾಗು" ಎನ್ನುತ್ತಾ ತನ್ನ ಸರ್‌ರನ್ನು ಸಮರ್ಥಿಸಿಕೊಳ್ಳತೊಡಗಿದ.

ಶಿವುವಿನ ಹತ್ರ ಹೆಚ್ಚಿನ ವಾದ ಸಾಧ್ಯವಿಲ್ಲವಾದ್ದರಿಂದ "ಓ ಹಾಗಾ?..." ಅನ್ನುತ್ತ ಸುಮ್ಮನಾದ ಅರವಿಂದ.

★★★

ಇತ್ತೀಚಿನ ವರ್ಷಗಳಲ್ಲಿ ಸಮಾಧಿ ಶಿವು ತನ್ನ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವತ್ತಲೂ ಗಮನ ಹರಿಸುತ್ತಿದ್ದಾನೆ. ಕಂಪನಿಗೆ ಬೇಕಾದ ಚಾಲಕರ ನೇಮಕ ಈತನ ವಶೀಲಿಯ ಮೇಲೇ ನಡೆಯುತ್ತದೆ. ಆಫೀಸಿನ ಮಧ್ಯಾಹ್ನದ ಊಟದ ಸರಬರಾಜು ಈತನೇ ನೋಡಿಕೊಳ್ಳುತ್ತಾನೆ. ಅಲ್ಲದೇ ಸಣ್ಣ ಪುಟ್ಟ ರಿಯಲ್ ಎಸ್ಟೇಟ್ ಬ್ರೋಕರಿಕೆ ಕೆಲಸ ಕೂಡಾ ಮಾಡುತ್ತಾನೆ. ಹೀಗಾಗಿ ಒಂದಿಷ್ಟು ಹೆಚ್ಚುವರಿ ಕಾಸು ಹುಟ್ಟುತ್ತಿದೆ. ಆಫೀಸಿನಲ್ಲಿ ಇನ್ನೂ ಹಳೆಯ ಕಾರು ಉಪಯೋಗಿಸುತ್ತಿರುವವರ ಹತ್ತಿರ 'ಕಾರು ಮಾರುವುದಿದ್ದರೆ ನನಗೊಂದು ಮಾತು ಹೇಳಿ' ಎಂದು ತಿಳಿಸಿಟ್ಟಿದ್ದಾನೆ. ಸಾಲ ಮಾಡಿ ಒಂದು ಸೆಕೆಂಡ್ ಹ್ಯಾಂಡ್ ಜೆಸಿಬಿ ಕೂಡಾ ಖರೀದಿಸಿದ್ದಾನೆ. ಅದನ್ನು ಜೇಕೆ ಕಂಪನಿಯ ಕೆಲಸಗಳಿಗೇ ಬಾಡಿಗೆ ಬಿಟ್ಟಿದ್ದಾನೆ. ಊರಲ್ಲಿ ಅಮ್ಮ ಹೆಣ್ಣು ನಿಕ್ಕಿ ಮಾಡಿಟ್ಟಿದ್ದಾಳೆ. ಇನ್ನೆರಡು ತಿಂಗಳಲ್ಲಿ ಮದುವೆಯಿದೆ. ಅಷ್ಟರಲ್ಲಿ ಯಾವುದಾದರೂ 20x40 ಸೈಟು ಅಗ್ರಿಮೆಂಟ್ ಹಾಕಿಕೊಂಡರೆ, ನಂತರ ಬರುವ ವರದಕ್ಷಿಣೆ ಹಣದಲ್ಲಿ ರಿಜಿಸ್ಟರ್ ಮಾಡಿದರಾಯ್ತು ಎಂದು ಓಡಾಡುತ್ತಿದ್ದಾನೆ.

ಈ ನಡುವೆ ಅರವಿಂದನೂ ಕಂಪನಿ ಬಿಟ್ಟು ತಿಂಗಳ ಮೇಲಾಗಿದೆ. ಹೀಗೊಂದು ದಿನ ಮೀಟಿಂಗ್ ಒಂದರಲ್ಲಿ, ಎಲ್ಲಾ ಪ್ರಾಜಕ್ಟುಗಳಲ್ಲೂ ನಿರೀಕ್ಷಿತ ಬಜೆಟ್ಟಿಗಿಂತ ಹೆಚ್ಚಿನ ಖರ್ಚಾಗುತ್ತಿದೆ ಎಂದು ಜೇಕೆ ಅತೀವ ಅಸಮಾಧಾನ ವ್ಯಕ್ತಪಡಿಸಿದ್ದರು. ನಡುವೆ ಅರವಿಂದ ತನ್ನ ಪ್ರಾಜಕ್ಟಿನ ಬಗ್ಗೆ ಏನೋ ಸಮಜಾಯಿಶಿ ಕೊಡುತ್ತ, 'ಸ್ಕೇರ್‌ಫೀಟಿಗೆ ಹತ್ತು ರೂಪಾಯಿ ಅಷ್ಟೇ ಹೆಚ್ಚಾಗುತ್ತಿದೆ' ಅಂದದ್ದು ಅವರನ್ನು ಕೆರಳಿಸಿತ್ತು. "ಈ ಹತ್ತುರೂಪಾಯಿ ಸೇರಲು ಸಾವಿರ ಪೈಸೆ ಬೇಕೆಂಬುದು ನಿನಗೆ ಗೊತ್ತಾ, ಮೈ ಫ್ರೆಂಡ್?" ಎಂದು ವಿಚಿತ್ರ ಸ್ವರದಲ್ಲಿ ಅರವಿಂದನನ್ನು ಕೇಳಿದ್ದರು. ಜೊತೆಯೇ ಹತ್ತಾರು ಪ್ರಶ್ನೆಗಳ ಬಾಣ. ಅರವಿಂದನಿಗೆ ಇಂಥವನ್ನೆಲ್ಲಾ ಸಹಿಸಿಕೊಳ್ಳಲಾಗುವುದಿಲ್ಲ. ಮಿಟಿಂಗ್ ಮುಗಿಸಿ ತನ್ನ ಟೇಬಲ್ಲಿಗೆ ಹಿಂದಿರುಗಿದ್ದ ಆತ ಬಹಳೇ ವ್ಯಾಕುಲನಾಗಿದ್ದ. ಅದೇ ಹೊತ್ತಿಗೆ ಯಾವುದೋ ಕೆಲಸಕ್ಕೆ ಈತನ ಹತ್ತಿರ ಬಂದಿದ್ದ ಶಿವುವಿನಲ್ಲಿ. "ಇನ್ನು ಹೆಚ್ಚು ದಿನ ನಾನಿಲ್ಲಿರುವುದಿಲ್ಲ" ಎಂದಿದ್ದ. "ಯಾಕೆ